# ಅನಿಕೇತನ
# ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh Bengaluru City University

ಸಂಪುಟ 01 | ಸಂಚಿಕೆ 05 | ಬೆಂಗಳೂರು | March 2026 | ಪುಟ 01

Monthly Campus Newsletter by the Department of Mass Communication and Journalism. (For Private Circulation Only)

## ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅನುದಾನ–ರಾಜ್ಯಪಾಲರ ಅಭಿಮತ

### ಕುಲಪತಿಗಳ ಸಮ್ಮೇಳನ

ಕರ್ನಾಟಕದ ಸಾರ್ವಜನಿಕ ವಿಶ್ವವಿದ್ಯಾಲಯಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಬೇಕಾದರೆ,ಕುಲಪತಿಗಳಲ್ಲಿ ಉತ್ತರದಾಯಿತ್ವ, ದಕ್ಷ ನಾಯಕತ್ವ, ಪಾರದರ್ಶಕ ಆಡಳಿತ ಹಾಗೂ ಸಂಪನ್ಮೂಲ ಕ್ರೋಢೀಕರಣದ ದೂರದೃಷ್ಟಿಯು ಅತ್ಯಗತ್ಯವೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ರಾಜ್ಯದ ಎಲ್ಲಾ 32 ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಘನತೆವೆತ್ತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್‌ರವರು ಜಾಗತಿಕ ಮಟ್ಟಕ್ಕೆ ಸರಿಹೊಂದುವ ಪಠ್ಯಕ್ರಮವನ್ನು ರೂಪಿಸುವುದು ಮತ್ತು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ವಿಶ್ವವಿದ್ಯಾಲಯಗಳ ಪ್ರಗತಿಗೆ ಅಗತ್ಯವೆಂದು ಅಭಿಪ್ರಾಯಪಟ್ಟರು.

ವಿಶ್ವವಿದ್ಯಾನಿಲಯಗಳಲ್ಲಿ ಆಡಳಿತ ಮತ್ತು ಶೈಕ್ಷಣಿಕ ರಂಗಗಳ ನಡುವಿನ ಹೊಂದಾಣಿಕೆ ಹಾಗೂ ಸಮನ್ವಯ ಉತ್ತಮ ಶಿಕ್ಷಣ ವ್ಯವಸ್ಥೆ ರೂಪಿಸಲು ಮೂಲಭೂತ ಅವಶ್ಯಕತೆಯಾಗಿದೆ ಎಂದು ಅವರು ಪ್ರತಿಪಾದಿಸಿದರು ಆಡಳಿತಾತ್ಮಕ ಭಿನ್ನಾಭಿಪ್ರಾಯಗಳಿಂದ ಅನವಶ್ಯಕ ತನಿಖೆಗಳಿಗೆ ಅವಕಾಶ ಸೃಷ್ಟಿಯಾಗದಂತೆ ಎಚ್ಚರಿಕೆ ವಹಿಸುವಂತೆ ಸಲಹೆಯಿತ್ತರು.

2026-27ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವಂತೆ ಅವರು ಮುಖ್ಯಮಂತ್ರಿಗಳ ಗಮನಸೆಳೆದರು. ವಿಶೇಷವಾಗಿ ಸಂಗೀತ, ಜಾನಪದ, ಸಂಸ್ಕೃತ ಮತ್ತು ಕನ್ನಡ ವಿಶ್ವವಿದ್ಯಾಲಯಗಳಿಗೆ ಸೂಕ್ತ ಬೆಂಬಲವನ್ನು ಒದಗಿಸುವ ಅಗತ್ಯವಿದೆ ಎಂದು ಹೇಳಿದರು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಹಣಕಾಸಿನ ಸವಾಲುಗಳಿದ್ದರೂ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಸ್ಪಷ್ಟ ದೃಷ್ಟಿಕೋನ ಹೊಂದುವ ಮೂಲಕ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಕುಲಪತಿಗಳು ಮುಂದಾಗಬೇಕೆಂದು ಸೂಚಿಸಿದರು. ಲಭ್ಯವಿರುವ ಸಿಎಸ್‌ಆರ್ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಅವರು ಸಲಹೆಯಿತ್ತರು.

ಸಮಾವೇಶದಲ್ಲಿ ವಿಶ್ವವಿದ್ಯಾಲಯಗಳ ಆಡಳಿತ ಹಾಗೂ ಶೈಕ್ಷಣಿಕ ವ್ಯವಸ್ಥೆಗೆ ಸಂಬಂಧಿಸಿದ 18ಕ್ಕೂ ಹೆಚ್ಚು ವಿಷಯಗಳ ಕುರಿತು ಚರ್ಚೆ ನಡೆಯಿತು. ಹಣಕಾಸು ಶಿಸ್ತು, ನಿವೃತ್ತಿ ವೇತನ ಸಮಸ್ಯೆ, ಆಯವ್ಯಯ ಮಂಡನೆಗೆ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು, ಘಟಿಕೋತ್ಸವದಲ್ಲಿ ಏಕರೂಪತೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೊರತೆ, ಸಿಎಸ್‌ಆರ್ ನಿಧಿಯ ಬಳಕೆ ಮುಂತಾದ ವಿಷಯಗಳು ಪ್ರಮುಖವಾಗಿ ಪ್ರಸ್ತಾಪಿಸಲ್ಪಟ್ಟವು.

ಕುಲಪತಿಗಳು ಪ್ರಸ್ತಾಪಿಸಿದ ಸಮಸ್ಯೆಗಳ ಕುರಿತು ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್‌ರವರು ಸರ್ಕಾರದ ಆರ್ಥಿಕ ಸಹಾಯದ ಜೊತೆಗೆ ವಿಶ್ವವಿದ್ಯಾಲಯಗಳು ಹಣಕಾಸಿನ ಶಿಸ್ತು, ಪಾರದರ್ಶಕತೆ ಮತ್ತು ಸಾಂಸ್ಥಿಕ ಹೊಣೆಗಾರಿಕೆಯನ್ನು ಪಾಲಿಸಬೇಕೆಂದು ಸೂಚಿಸಿದರು. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿರಬೇಕು; ಭ್ರಷ್ಟಾಚಾರ ಕಂಡುಬಂದಲ್ಲಿ ಶಿಸ್ತುಕ್ರಮ ಅನಿವಾರ್ಯವಾಗುತ್ತದೆ ಎಂದು ಅವರು ಎಚ್ಚರಿಸಿದರು. ಅನಗತ್ಯವಾದ ವೆಚ್ಚಗಳನ್ನು ತಡೆಯಲು ವಿಶ್ವವಿದ್ಯಾಲಯಗಳು ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಬೇಕೆಂದು ಅವರು ಇದೇ ವೇಳೆ ತಿಳಿಸಿದರು. ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಅಗತ್ಯವಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು,



ಕುಲಪತಿಗಳ ಸಮ್ಮೇಳನದಲ್ಲಿ ರಾಜ್ಯಪಾಲರೊಂದಿಗೆ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರು

ವಿಶ್ವವಿದ್ಯಾಲಯಗಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆಯ ವಾತಾವರಣ ಬಲಗೊಳ್ಳಬೇಕೆಂದು ಹೇಳಿದರು. ಸಮಾಜ ಪರಿವರ್ತನೆಗೆ ಉತ್ತೇಜನ ನೀಡುವ ಶಿಕ್ಷಣ ವ್ಯವಸ್ಥೆ ರೂಪಿಸುವುದು ವಿಶ್ವವಿದ್ಯಾಲಯಗಳ ಕರ್ತವ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ವಿಶ್ವವಿದ್ಯಾಲಯಗಳು ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ಜವಾಬ್ದಾರಿತನವನ್ನು ಉತ್ತೇಜಿಸುವ ಕೇಂದ್ರಗಳಾಗಬೇಕು ಎಂದು ಅವರು ಕರೆ ನೀಡಿದರು. ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿ ಮತ್ತು ಸವಾಲುಗಳ ಕುರಿತು ಅಧ್ಯಯನ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು. ಪಠ್ಯಕ್ರಮವು ಪ್ರಸ್ತುತ ಮತ್ತು ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿರುವಂತೆ ನೋಡಿಕೊಳ್ಳಬೇಕು. ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಮತ್ತು ಮಷಿನ್ ಲರ್ನಿಂಗ್‌ನಂತಹ ಭವಿಷ್ಯದ ಕ್ಷೇತ್ರಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಇಂದಿನ ಅತ್ಯಗತ್ಯವಾಗಿದೆ ಎಂದು ಮುಖ್ಯಮಂತ್ರಿಯವರು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಒಟ್ಟು ದಾಖಲಾತಿ ಅನುಪಾತ (ಉಇಖ) ದಕ್ಷಿಣದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆಯಿದ್ದು 2023–24ರಲ್ಲಿ ಸುಮಾರು ಶೇ.39.6 ರಷ್ಟಿದೆ, 2030ರೊಳಗೆ ಇದು ಶೇ.50 ರಷ್ಟಾಗಬೇಕೆಂದು ಅವರು ಸೂಚಿಸಿದರು. ಈ ವರ್ಷದ ಬಜೆಟ್‌ನಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ಕಲ್ಪಿಸಿರುವುದಾಗಿ ಅವರು ತಿಳಿಸಿದರು.

ಸಮ್ಮೇಳನದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾದ ಖುಶ್ಬು ಜಿ. ಗೋಯೆಲ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರಾದ ಮಂಜುಶ್ರೀ, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ್, ಕಾರ್ಯಕಾರಿ ನಿರ್ವಾಹಕ ಜಿ. ಚಂದ್ರಶೇಖರ್ ಸೇರಿದಂತೆ ಹಲವಾರು ಅಧಿಕಾರಿಗಳು ಭಾಗವಹಿಸಿದ್ದರು.

## ಡಿಪ್ಲೊಮ ಮತ್ತು ಕೌಶಲ್ಯ ತರಬೇತಿ ಕಾರ್ಯಕ್ರಮ ಒಡಂಬಡಿಕೆಗಳಿಗೆ ಅಂಕಿತ

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿ ಮತ್ತು ಬಾಲವಾಡಿಗಳಲ್ಲಿ ಮತ್ತು ಇತರೆ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸೂಕ್ತ ವೃತ್ತಿ ತರಬೇತಿ ಒದಗಿಸಲು "ಆರಂಭಿಕ ಬಾಲ್ಯದ ಆರೈಕೆ ಮತ್ತು ಶಾಲಾಪೂರ್ವ ಶಿಕ್ಷಣದ ಡಿಪ್ಲೊಮ ಕೋರ್ಸ್"ನ್ನು (ಡಿಇಸಿಸಿಐಇ) ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರಾಜ್ಯದಲ್ಲೇ ಪ್ರಥಮ ಬಾರಿಗೆ ಅತಿಶೀಘ್ರದಲ್ಲೇ ಆರಂಭಿಸಲಿದೆ.




CBR ಮತ್ತು RMH ಸಂಸ್ಥೆಗಳೊಂದಿಗೆ ಒಡಂಬಡಿಗಳಿಗೆ ಅಂಕಿತ

ಈ ಸಂಬಂಧ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಅವರ ಸಮ್ಮುಖದಲ್ಲಿ ಕುಲಸಚಿವರಾದ ಎ. ನವೀನ್ ಜೋಸೆಫ್ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿರುವ ಈ ಡಿಪ್ಲೊಮ ಕೋರ್ಸ್ ಆರಂಭಿಸಲು ಸಮುದಾಯ ಆಧಾರಿತ ಪುನರ್ವಸತಿ (ಸಿ.ಬಿ.ಆರ್) ನೆಟ್‌ವರ್ಕ್ (ಸೌತ್ ಏಷ್ಯಾ) ಸ್ವಯಂಸೇವಾ ಸಂಸ್ಥೆಯ ಪ್ರಾದೇಶಿಕ ಸಲಹೆಗಾರರಾದ ಡಾ.ಇಂದುಮತಿ ರಾವ್ ಅವರೊಂದಿಗೆ ಅಧಿಕೃತ ಒಡಂಬಡಿಕೆಗೆ ಫೆಬ್ರವರಿ 24ರಂದು ಅಂಕಿತ ಹಾಕಿದರು.

ಒಂದು ವರ್ಷ ಅವಧಿಯ ಈ ಡಿಪ್ಲೊಮ ಕೋರ್ಸ್ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಮಾದರಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಲಭ್ಯವಿರುತ್ತದೆ. ಪದವಿ ಪೂರ್ವ ಶಿಕ್ಷಣ (ಪಿಯುಸಿ) ಪೂರೈಸಿದ ಅಭ್ಯರ್ಥಿಗಳು ಈ ಕೋರ್ಸ್ ಪ್ರವೇಶಿಸಲು ಅರ್ಹರಾಗಿರುತ್ತಾರೆ. ಅಂಗನವಾಡಿ ಕಾರ್ಯಕರ್ತರಾಗಿ ಕನಿಷ್ಟ ಮೂರು ವರ್ಷಗಳ ಅನುಭವ ಹೊಂದಿದ್ದರೆ ಎಸ್–ಎಸ್‌ಎಲ್‌ಸಿ ವಿದ್ಯಾರ್ಹತೆ ಸಾಕಾಗುತ್ತದೆ. ಇದರ ಜೊತೆಗೆ ಆರು ತಿಂಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್ ಸಹ ಲಭ್ಯವಿರುತ್ತದೆ.

**ಕೌಶಲ್ಯ ಮತ್ತು ಉದ್ಯೋಗ ತರಬೇತಿ ಕಾರ್ಯಕ್ರಮ ಒಡಂಬಡಿಕೆ**

ವಿದ್ಯಾರ್ಥಿಗಳಲ್ಲಿ ಉದ್ಯಮ ವಲಯದ ಅಗತ್ಯಗಳಿಗೆ ಅನುಗುಣವಾದ ಕೌಶಲ್ಯ ಮತ್ತು ಉದ್ಯೋಗ ನೇಮಕಾತಿಗೆ ಪೂರಕವಾದ ವೃತ್ತಿಪರ ತರಬೇತಿ ಒದಗಿಸಲು ಒರಾಕಲ್ ಅಕಾಡೆಮಿಯ ಸಹಭಾಗಿತ್ವದ ರೀಚ್ ಮಚ್ ಹೈಯರ್ (ಆರ್.ಎಂ.ಎಚ್) ಪ್ರತಿಷ್ಠಾನದ ಸಿಇಓ ಡಾ. ಓ.ಪಿ.ಗೋಯಲ್‌ರೊಂದಿಗೆ ಮತ್ತೊಂದು ಮಹತ್ವದ ಒಡಂಬಡಿಕೆಗೆ ಇದೇ ದಿನ ಅಂಕಿತ ಹಾಕಲಾಗಿದೆ.

ಈ ಕಾರ್ಯಕ್ರಮದ ಮೂಲಕ ವಿಶ್ವವಿದ್ಯಾನಿಲಯದ ಹಾಗೂ ಸಂಯೋಜಿತ ಕಾಲೇಜುಗಳ ಆಸಕ್ತ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಒಟ್ಟು 90 ತಾಸುಗಳ ಅವಧಿಯ ಉಚಿತ ತರಬೇತಿ ಒದಗಿಸಲಾಗುವುದು. ಡಿಜಿಟಲ್ ಮತ್ತು ದತ್ತಾಂಶ ಕೌಶಲ್ಯ, ಕೃತಕ ಬುದ್ಧಿಮತ್ತೆ ಮತ್ತು ಭವಿಷ್ಯದ ತಂತ್ರಜ್ಞಾನ ಹಾಗೂ ವೃತ್ತಿಪರ ಸಂವಹನ ಸೇರಿದಂತೆ ಅನೇಕ ಉಪಯುಕ್ತ ವಿಷಯಗಳನ್ನು ಈ ತರಬೇತಿಯು ಒಳಗೊಂಡಿರುತ್ತದೆ. ಇದಲ್ಲದೆ ಬೋಧನಾ ಸಾಮರ್ಥ್ಯ ಅಭಿವೃದ್ಧಿ ಮತ್ತು ಪ್ರಚಲಿತ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ಪರಿಷ್ಕರಣೆಗೂ ಆರ್‌ಎಂಎಚ್ ಪ್ರತಿಷ್ಠಾನ ವಿಶ್ವವಿದ್ಯಾನಿಲಯಕ್ಕೆ ನೆರವಾಗಲಿದೆ.

ಮೌಲ್ಯಮಾಪನ ವಿಭಾಗದ ಕುಲಸಚಿವರಾದ ಪ್ರೊ. ರಮೇಶ. ಬಿ.ಕುಡೇನಟ್ಟಿ, ವಿವಿಧ ನಿಕಾಯಗಳ ಡೀನರು ಮತ್ತು ಹಿರಿಯ ಪ್ರಾಧ್ಯಾಪಕರು ಒಡಂಬಡಿಕೆ ಸಹಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ರಾಷ್ಟ್ರೀಯ ಭಾವೈಕ್ಯತಾ ಶಿಬಿರ

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎನ್‌ಎಸ್–ಎಸ್ ಕೋಶದ ಆಶ್ರಯದಲ್ಲಿ 2026 ಫೆಬ್ರವರಿ 20ರಿಂದ 26ರವರೆಗೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರವನ್ನು ಆಯೋಜಿಸಲಾಗಿತ್ತು. ಸೆಂಟ್ರಲ್ ಕಾಲೇಜ್ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ರವರು ಜ್ಞಾನ ಮತ್ತು ಕೌಶಲ್ಯ ಕಲಿಕೆ ಜೊತೆಗೆ ಸೇವಾ ಮನೋಭಾವ ರೂಪಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಅನೇಕ ಜಾತಿ. ಧರ್ಮ, ಭಾಷೆ ಮತ್ತು ಸಂಸ್ಕೃತಿಗಳ ಮಹಾಸಂಗಮವಾದ ಭಾರತ ದೇಶದಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಸದಾ ಸಂರಕ್ಷಿಸುವ ಮಹತ್ವದ ಹೊಣೆಗಾರಿಕೆ ದೇಶದ ಯುವ ಪೀಳಿಗೆಯ ಮೇಲಿದೆ ಎಂದು ಅವರು ಪ್ರತಿಪಾದಿಸಿದರು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಆರ್.ಚೇತನ್, ಕೋಮುವಾದ ಮತ್ತು ಪ್ರಾದೇಶಿಕ ಅಸಮತೋಲನದಂತಹ ಸವಾಲುಗಳನ್ನು ನಿಭಾಯಿಸುವ ಮೂಲಕ ಭಾವೈಕ್ಯತೆ ಕಾಪಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ರಾಜ್ಯ ಎನ್–ಎಸ್‌ಎಸ್ ಅಧಿಕಾರಿಯಾದ ಡಾ.ಪ್ರತಾಪ್ ಲಿಂಗಯ್ಯನವರು ಮಾತನಾಡಿ, 1969 ರಲ್ಲಿ ಕೇವಲ ನಲವತ್ತು ಸಾವಿರ ಸ್ವಯಂಸೇವಕರ ಪಡೆಯೊಂದಿಗೆ



ಭಾವೈಕ್ಯತಾ ಶಿಬಿರದಲ್ಲಿ ಪಾಲ್ಗೊಂಡ ಸ್ವಯಂ ಸೇವಕರು

ಪ್ರಾರಂಭವಾದ ರಾಷ್ಟ್ರೀಯ ಸೇವಾ ಯೋಜನೆ ಇದೀಗ 45 ಲಕ್ಷಕ್ಕೂ ಅಧಿಕ ಕಾರ್ಯಕರ್ತರ ಬೃಹತ್ ಸಂಘಟನೆಯಾಗಿ ಬೆಳೆದಿದ್ದು ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ವಿವರಿಸಿದರು.

ವಿಶ್ವವಿದ್ಯಾನಿಲಯುದ ಕುಲಸಚಿವರಾದ ಎ .ನವೀನ್ ಜೋಸೆಫ್‌ರವರು ಅತಿಥಿಗಳನ್ನು ಸ್ವಾಗತಿಸಿದರು. ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕರಾದ ಗಿರ್ಧರ್ ಉಪಾಧ್ಯಾಯ್, ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ. ಬಿ. ಕುಡೇನಟ್ಟಿ, ವಿತ್ತಾಧಿಕಾ–ರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ. ಬಿ.ಆರ್.ಸುಪ್ರೀತ್. ಕೆ.ಪಿ.ಪಾಟೀಲ್ ಮತ್ತು ಡಾ.ಫ್ರಾನ್ಸಿಸ್ ಅಸ್ಸಿಸಿ ಅಲ್ಮೈಡಾ ವೇದಿಕೆಯಲ್ಲಿ ಉಪಸ್ಥಿತ–ರಿದ್ದರು. ಎನ್‌ಎಸ್‌ಎಸ್ ಸಂ–ಯೋಜಕರಾದ ಡಾ. ಎಚ್.ಜಿ. ಗೋವಿಂದೇಗೌಡ ವಂದಿಸಿದರು.

ದೇಶದ ಏಳು ರಾಜ್ಯಗಳ 17 ವಿಶ್ವವಿದ್ಯಾಲಯಗಳಿಂದ ಒಟ್ಟು 151 ಸ್ವಯಂಸೇವಕರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ವಿಪತ್ತು ನಿರ್ವಹಣೆ, ಸ್ವಚ್ಛತಾ ಅಭಿಯಾನ, ವಸ್ತು ಪ್ರದರ್ಶನ, ತ್ಯಾಜ್ಯ ಸಂಸ್ಕರಣ ಘಟಕದ ವೀಕ್ಷಣೆ, ಕೌಶಲ್ಯಾಭಿವೃದ್ಧಿ, ಸೈಬರ್ ಭದ್ರತೆ, ಕ್ಯಾನ್ಸರ್ ಜಾಗೃತಿ, ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿಯ ಪಾತ್ರದ ಕುರಿತ ಕಾರ್ಯಾಗಾರ. ಯುವ ಸಂಸತ್ ಕಲಾಪ, ದಕ್ಷಿಣ ಭಾರತದ ಜಲಿಯನ್‌ವಾಲಾಬಾಗ್ ಎಂದೇ ಪ್ರಖ್ಯಾತವಾದ ವಿದುರಾಶ್ವತ್ಥ ಹುತಾತ್ಮ ಸ್ಮಾರಕ ಸ್ಥಳಕ್ಕೆ 'ಕ್ಷೇತ್ರ ಭೇಟಿ' ಮುಂತಾದ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿದಿನ ಸಂಜೆ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

**ಸಮಾರೋಪ ಸಮಾರಂಭ:** ಶಿಬಿರದ ಮುಕ್ತಾಯ ದಿನದಂದು ಜರುಗಿದ ಸಮಾರೋಪ ಸಮಾರಂಭದಲ್ಲಿ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮತ್ತು ಎನ್‌ಎಸ್–ಎಸ್ ಪ್ರಾದೇಶಿಕ ನಿರ್ದೇಶಕರಾದ ಗಿರ್ಧರ್ ಉಪಾಧ್ಯಾಯ್ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡ ಸ್ವಯಂಸೇವಕರಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು. ಶಿಬಿರಾರ್ಥಿಗಳು ತಮ್ಮ ಅಮೂಲ್ಯ ಅನುಭವಗಳನ್ನು ಹಂಚಿಕೊಂಡರು. ಶಿಬಿರವನ್ನು ಯಶಸ್ವಿಗೊಳಿಸಲು ಸಹಕರಿಸಿದ ಎಲ್ಲರಿಗೂ ಸಂಯೋಜಕರಾದ ಡಾ.ಎಚ್.ಜಿ.ಗೋವಿಂದೇಗೌಡ ಧನ್ಯವಾದಗಳನ್ನುಸಮರ್ಪಿಸಿದರು.

# ಯುವ ರೆಡ್‌ಕ್ರಾಸ್ ಕೋಶದ ತರಬೇತಿ

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ಯುವ ರೆಡ್‌ಕ್ರಾಸ್‌ನ ಕಾರ್ಯಕ್ರಮ ಅಧಿಕಾರಿಗಳ ಸಭೆ ಮತ್ತು ತರಬೇತಿ ಶಿಬಿರವನ್ನು ಕುಲಪತಿಗಳಾದ ಪ್ರೊ. ರಮೇಶ್.ಬಿ. ಫೆಬ್ರವರಿ 11ರಂದು ಉದ್ಘಾಟಿಸಿದರು.

ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ಜ್ಞಾನ ಮತ್ತು ಕೌಶಲ್ಯದ ಜೊತೆಗೆ ಸಾಮಾಜಿಕ ಹೊಣೆಗಾ–ರಿಕೆ ಹಾಗೂ ಮಾನವೀಯ ಸಂವೇದನೆ ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನುಪ್ರೇರೇಪಿಸಿದರು.

ಮಹಿಳೆಯರು ಮತ್ತು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದು ಗ್ರಾಮೀಣ ಪ್ರದೇಶಗಳ ಜನರು ಆರೋಗ್ಯ ಬಿಕ್ಕಟ್ಟಿನ ಗಂಭೀರ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ಅವರು ಇದೇ ವೇಳೆ ಪ್ರಸ್ತಾಪಿಸಿದರು.

ರಕ್ತದಾನ ಹಾಗೂ ರಸ್ತೆ ಅಪಘಾತ ಮತ್ತು ಇತರೆ ದುರಂತಗಳ ಸಂದರ್ಭದಲ್ಲಿ ಮಾನವೀಯ ನೆರವು ನೀಡಲು ಮುಂದಾಗುವ ಸೇವಾ ಮನೋಭಾವವನ್ನು ಉತ್ತೇಜಿಸಲು ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುವುದೆಂದು ಕುಲಪತಿಗಳು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ಬೆಂಗಳೂರು ನಗರ ಜಿಲ್ಲಾ ಕಾರ್ಯದರ್ಶಿ ಡಾ. ರಾಜೇಶ್, ರಾಜ್ಯ ಸಂಯೋಜಕರಾದ ಆನಂದ್ ಮತ್ತು ಹಿರಿಯ ಸಲಹೆಗಾರರಾದ ಡಾ.ಸಿ.ಎನ್. ಎನ್.ರಾಜು ಶಿಬಿರಾರ್ಥಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಿದರು. ಡಾ. ಗೋವಿಂದೇಗೌಡ ಸ್ವಾಗತಿಸಿದರು ಮತ್ತು ದೀಪಿಕಾ ಎನ್. ವಂದಿಸಿದರು. ವಿದ್ಯಾ ಕಾರ್ಯಕ್ರಮ ನಿರೂಪಿಸಿದರು.


ಯುವ ರೆಡ್ ಕ್ರಾಸ್ ತರಬೇತಿ ಶಿಬಿರ ಉದ್ಘಾಟನೆ

# ಪಿಎಚ್‌ಡಿ ಪ್ರವೇಶ – ಅರ್ಜಿ ಆಹ್ವಾನ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಗತ್ಯ ವಿದ್ಯಾರ್ಹತೆ ಹೊಂದಿರುವ ಆಸಕ್ತ ಸ್ನಾತಕೋತ್ತರ ಪದವೀಧರರು ಆನ್‌ಲೈನ್/ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು 18–03–2026 ಅಂತಿಮ ದಿನಾಂಕವಾಗಿದ್ದು ರೂ.200 ದಂಡ ಶುಲ್ಕದೊಂದಿಗೆ ದಿ.25–03–2026 ರವರೆಗೂ ಅವಕಾಶವಿದೆ. ಪ್ರವೇಶಕ್ಕೆ ಅಗತ್ಯವಾದ ವಿದ್ಯಾರ್ಹತೆ, ಪ್ರವೇಶ ಪರೀಕ್ಷೆ ವಿವರಗಳು, ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಹೊಂದುವ ವಿವರಗಳು, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಸಂದಾಯದ ವಿವರ, ಲಭ್ಯವಿರುವ ವಿಷಯವಾರು ಖಾಲಿ ಸ್ಥಾನಗಳ ಮಾಹಿತಿ, ಸಂಶೋಧನಾ ಕೇಂದ್ರಗಳ ವಿವರ, ಇತ್ಯಾದಿಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ https://bcu.ac.in/onlineapp/ ಪ್ರಕಟಿಸಲಾಗಿದೆ. ಪ್ರವೇಶ ಪರೀಕ್ಷೆ ದಿನಾಂಕವನ್ನು ವಿಶ್ವವಿದ್ಯಾನಿಲಯದ ಜಾಲತಾಣ www.bcu.ac.in ಇಲ್ಲಿ ಪ್ರಕಟಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಶುಲ್ಕ ಪಾವತಿ ರಶೀದಿ ಹಾಗೂ ಇತರೆ ದಾಖಲೆಗಳೊಂದಿಗೆ ಕುಲಸಚಿವರು (ಮೌಲ್ಯಮಾಪನ), ಜ್ಞಾನ ಜ್ಯೋತಿ – ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವ–ರಿಗೆ ತಲುಪಿಸಲು ಕೋರಲಾಗಿದೆ.

# ಕಲಾಸಿರಿ – ಸಾಂಸ್ಕೃತಿಕ ಸಂಭ್ರಮ

ಮಲ್ಲೇಶ್ವರಂನಲ್ಲಿರುವ, ವಿಶ್ವವಿದ್ಯಾನಿಲಯದ ಮಹಿಳಾ ಘಟಕ ಕಾಲೇಜಿನಲ್ಲಿ ಪ್ರತಿ ವರ್ಷದಂತೆ 'ಕಲಾಸಿರಿ ಸರಣಿ–03' ಅಂತರ್ ತರಗತಿಗಳ ಕಲೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಫೆಬ್ರವರಿ 20 ಮತ್ತು 21ರಂದು ಕಾಲೇಜಿನಲ್ಲಿ ಆಯೋಜಿಸಲಾಗಿ–ತ್ತು. ರಂಗೋಲಿ, ಸಮೂಹ ನೃತ್ಯ ಸಮೂಹ ಗಾಯನ, ಕಿರು ನಾಟಕ, ಮೆಹಂದಿ, ಕುಕಿಂಗ್ ವಿಥೌಟ್ ಫೈರ್, ಫ್ಯಾಶನ್ ಷೋ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ ಜ್ಯೋತಿ ವೆಂಕಟೇಶ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳನ್ನು ಅವರು ಉತ್ತೇಜಿಸಿದರು.


ವಿವಿ ಮಹಿಳಾ ಘಟಕ ಕಾಲೇಜಿನಲ್ಲಿ ನೃತ್ಯ ಸಂಭ್ರಮ

# 'ಮೊಬೈಲ್ ಬಿಡಿ–ಪುಸ್ತಕ ಹಿಡಿ'

**–ಸುಪ್ರೀತಾ. ಎಸ್.**
**ಎಂ.ಎ. ಕನ್ನಡ (ಪ್ರಥಮ)**

ಮಕ್ಕಳಲ್ಲಿ ಮೊಬೈಲ್ ಗೀಳು ದಿನೇ ದಿನೇ ಪ್ರಬಲವಾಗುತ್ತಿರುವ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆ 'ಮೊಬೈಲ್ ಬಿಡಿ–ಪುಸ್ತಕ ಹಿಡಿ' ಅಭಿಯಾನವನ್ನು ಆರಂಭಿಸಿದೆ. ಇದೇ ವೇಳೆ ಹದಿನಾರು ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಶಾಲೆಗಳ ಆವರಣದಲ್ಲಿ ಮೊಬೈಲ್ ಬಳಕೆಯುನ್ನು ನಿಷೇಧಿಸುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ವಿಪರೀತ ಮೊಬೈಲ್ ಬಳಕೆ ಗೀಳಿನ ಪರಿಣಾಮವಾಗಿ ಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತಿರುವ ಹಾಗೂ ಪೋಷಕರು ಮತ್ತು ಶಿಕ್ಷಕರ ಆಕ್ರೋಶಕ್ಕೆ ಗು–ರಿಯಾಗಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವ ಪ್ರಕರಣಗಳೂ ದಿನನಿತ್ಯ ವರದಿಯಾಗುತ್ತಿವೆ. ಈ ಹಿನ್ನಲೆಯಲ್ಲಿ ಅಂಗೈಯಲ್ಲೇ ಜಗತ್ತನ್ನು ತೋರಿಸುವ ಮಾಯಾ ದರ್ಪಣವಾದ ಜಂಗಮವಾಣಿ ಇದೀಗ ಮಕ್ಕಳ ಕ್ರಿಯಾಶೀಲತೆಯನ್ನು ಕುಗ್ಗಿಸುವ ಮಾರಕ ಸಾಧನವಾಗಿ ಮಾರ್ಪಟ್ಟಿದೆ ಎಂಬ ಆತಂಕದ ಕೂಗು ಕೇಳಿಬರುತ್ತಿದೆ.

ಮಾಹಿತಿ ಭಂಡಾರವಾದ ಮೊಬೈಲ್ ಫೋನ್ ವಿವೇಚನಾಯುತವಾಗಿ ಅಗತ್ಯವಿದ್ದಷ್ಟು ಪ್ರಮಾಣದಲ್ಲಿ ಬಳಸಲ್ಪಟ್ಟರೆ ಸಕಾರಾತ್ಮಕ ಫಲಶೃತಿ ನೀಡಬಹುದಾಗಿದ್ದು ಮಿತಿ ಮೀರಿದರೆ ವ್ಯಾಕುಲತೆಗೆ ಕಾರಣವಾಗಬಹುದಾದ ಅಪಾಯವನ್ನು ಅಲ್ಲಗಳೆಯುವಂತಿಲ್ಲ. ಈ ಸಮಸ್ಯೆ ಇದೀಗ ಅತ್ಯಂತ ಸಂಕೀರ್ಣ ಸವಾಲಾಗಿ ಪರಿಣಮಿಸಿದ್ದು ಮಕ್ಕಳ ಶೋಷಣೆ ಹಾಗೂ ಸೈಬರ್ ವಂಚನೆ ಪ್ರಕರಣಗಳಿಗೂ ಎಡೆಮಾಡಿಕೊಟ್ಟಿದೆ.

ಇನ್ನೊಂದೆಡೆ ಈ ತಂತ್ರಜ್ಞಾನ ಸೌಲಭ್ಯವನ್ನು ಸಂಪೂರ್ಣವಾಗಿ ಮಕ್ಕಳಿಂದ ಕಸಿದುಕೊಳ್ಳುವುದು ಸೂಕ್ತವಲ್ಲವೆಂಬ ಪ್ರತಿವಾದವೂ ಕೇಳಿಬರುತ್ತಿದೆ. ಅತಿಸೂಕ್ಷ್ಮವಾಗಿರುವ ಈ ಸಮಸ್ಯೆಯನ್ನು ನಿಭಾಯಿಸಲು ಪೋಷಕರು, ಶಿಕ್ಷಕರು, ಮನೋವಿಜ್ಞಾನಿಗಳು, ಸಮಾಜ ಮತ್ತು ಸರ್ಕಾರ ಸಕಾರಾತ್ಮಕ ಸಮತೋಲಿತ ಚಿಂತನೆಯ ಮೂಲಕ ಮಕ್ಕಳಿಗೆ ಸೂಕ್ತ ಮಾರ್ಗದರ್ಶನವನ್ನು ಒದಗಿಸಬೇಕಾಗಿದೆ.


*Image Source: 9gag.com*

# ವಂದೇ ಮಾತರಂ ಕಡ್ಡಾಯ – ಅಧಿಕೃತ ಮಾರ್ಗಸೂಚಿ

ವಂದೇಮಾತರಂ ರಾಷ್ಟ್ರೀಯ ಗೀತೆಗೆ ಈಗ 150 ವರ್ಷದ ಸಂಭ್ರಮ. 1937ರಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ವಂದೇ ಮಾತರಂ ಗೀತೆಯ ಮೊದಲೆರಡು ಚರಣಗಳನ್ನು ಮಾತ್ರ ರಾಷ್ಟ್ರೀಯ ಗೀತೆಯಾಗಿ ಅಳವಡಿಸಿಕೊಳ್ಳಲಾಗಿತ್ತು. ಇನ್ನುಳಿದ ಚರಣಗಳಲ್ಲಿ ಹಿಂದೂ ದೇವತೆಗಳ ಗುಣಗಾನವಿರುವ ಕಾರಣ ಮತೀಯ ಸೌಹಾರ್ದತೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಅವುಗಳನ್ನು ಕೈಬಿಡುವುದು ಸೂಕ್ತವೆಂದು ನಿರ್ಧರಿಸಲಾಗಿತ್ತು. ತದನಂತರ ಸಂವಿಧಾನ ರಚನಾ ಸಭೆಯಲ್ಲೂ ಇದೇ ನಿಲುವನ್ನು ಅನುಮೋದಿಸಲಾಗಿತ್ತು.

ಇದೀಗ ಸಂಸತ್‌ನಲ್ಲಿ ನಡೆದ ಸುದೀರ್ಘ ಚರ್ಚೆಯ ಬಳಿಕ ಕೇಂದ್ರ ಗೃಹ ಸಚಿವಾಲಯ ಗೀತೆಯ ಪೂರ್ಣಪಾಠವನ್ನು ಕಡ್ಡಾಯವಾಗಿ ಹಾಡುವಂತೆ ಅಧಿಕೃತ ಮಾರ್ಗಸೂಚಿ ಹೊರಡಿಸಿದೆ. ಜನವರಿ 28 ರಂದು ಪ್ರಕಟಿಸಿರುವ ಈ ಆದೇಶದನ್ವಯ ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಷ್ಟ್ರಗೀತೆಗೆ ಮುನ್ನ ವಂದೇ ಮಾತರಂ ಗೀತೆಯ ಎಲ್ಲಾ ಆರು ಚರಣಗಳನ್ನೂ ಅಧಿಕೃತ ಶೈಲಿಯಲ್ಲಿ 3 ನಿಮಿಷ 10 ಸೆಕೆಂಡುಗಳ ಅವಧಿಯಲ್ಲಿ ಹಾಡುವುದು ಕಡ್ಡಾಯವಾಗಿದೆ. ವಂದೇ ಮಾತರಂ ಹಾಡುವಾಗ ಗೌರವ ಸೂಚಿಸಬೇಕೆಂದೂ ನಿರ್ದೇಶಿಸಲಾಗಿದೆ.

ಶಾಲಾಕಾಲೇಜುಗಳ ಚಟುವಟಿಕೆಯ ಭಾಗವಾಗಿ ಗೀತೆಯನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ.

# WEEHtec–2026 Technical Conference

## Water Crisis threat looms over the City of Lakes

Bengaluru, once renowned as the "City of Lakes," is today facing a serious water crisis. There is an urgent need to formulate and implement an effective action plan for proper water management, emphasized Prof. Ramesh B., Vice-Chancellor of Dr. Manmohan Singh Bengaluru City University.

In his Presidential remarks at the conference on Water, Energy, Environment and Health Conservation titled WEEHtec–2026, held at Jnanajyothi Auditorium of Central College campus, on February 9th, he stressed that greater emphasis must be laid on sustainable development in the interest of future generations.

He observed that water is not merely a resource, but a means of life and livelihood. However, neglecting its importance and indulging in its misuse has created an extremely dangerous situation, he explained. He further stated that ensuring safe energy supply, controlling environmental pollution, and protecting public health are major responsibilities of the government and public institutions. In this direction, he assured that the university is ready to actively contribute and collaborate.



*Water, Energy, Environment and Health Experts at WEEHtec- 2026 Conference with Vice Chancellor Prof. Ramesh B*

The chief guest, former Chairman of the All India Council for Technical Education (AICTE), Prof.T.G. Seetharam, in his address, suggested that comprehensive plans should be implemented for rainwater harvesting and reuse of waste water in both urban and rural areas. He explained that just like food security, water security is equally vital. Along with this, energy efficiency and environmental conservation form the foundation of sustainable development.

The Technical Chairman of the conference and former MLA Dr.A.Narayanaswamy, in his keynote address, stated that issues related to water and energy security, as well as climate change, are troubling the entire world. He pointed out that the misuse of natural resources and environmental pollution have adversely affected public health, and therefore effective programs must be designed to ensure the survival of humankind.

In his welcome address, the Organizing Secretary of the conference, Dr.B.R.Supreeth, expressed hope that the newly launched "Incubation Center" at the Prasanna Kumar Block of Central College campus would become a significant milestone in addressing contemporary challenges. He also assured that necessary support and cooperation for the management of this research center would be provided through the 'Zero Waste Society' located in Indian Institute of Science (IISc).

A delegation from WWM International, Chicago, along with representatives from various industrial organizations, participated in the conference. Environmental expert Dr.Rampur Vishwanath, WEEHtec-2026 organizers Prof. Inayatulla, Pawan Kumar, and Yoginder Poola and University's Registrar (Evaluation) Ramesh.B.Kudenatti were present. As part of the conference, a technical exhibition was also organized.

# Textbooks Release

A one day Workshop on "New English Textbooks: Design, Pedagogy and Classroom Practice" was organised by the Department of English and Media Studies, Vijaya College, in association with the Department of Research and Studies in English, Dr. Manmohan Singh Bengaluru City University,on February 19th at Jayanagar, Bengaluru. Prof. Ramesh B.,Vice Chancellor of the University, in his inaugural address, emphasized the growing importance of language learning in higher education and also highlighted the need to sensitize students on contemporary issues such as gender, inclusivity and social awareness. He also stressed the vital role of technology-enabled learning, noting its significance in enhancing classroom engagement and communication skills. On this occasion, Vice Chancellor released IV Semester English textbooks for BA, BSc, BCom, BBA, BCA, and textbooks for Additional English and Major English, according to SEP 2024. Dr. T.N.Thandava Gowda, Chairperson of Board of Studies and Department of English, BCU spoke about the vision, academic framework, and pedagogical objectives underlying the newly released textbooks, highlighting their relevance for diverse undergraduate disciplines. Addressing the gathering, Dr.T.A.Balakrishna, Secretary, BHSHES. reflected on the enduring significance of English education in today's globalised world and its role in shaping informed, articulate learners. The event witnessed enthusiastic participation from faculty members of English departments from various affiliated colleges who appreciated the initiative and contributed actively to the academic discussions.

**- YadhuShree, Eng Dept.**

## BCUSMS STOCK MARKET VISIT

A hands-on live stock market trading session was conducted for MBA students of BCUSMS on 6th February 2026 in collaboration with Motilal Oswal Financial Services. The session offered students valuable real-time exposure to equity markets through live trading terminals, helping them understand how financial markets operate during active trading hours. Experts from the industry guided participants in analyzing price movements, volumes, indices, and basic technical indicators, while also discussing the importance of risk management, portfolio diversification, and trading psychology. Through interactive discussions and simulated trading activities, students were able to connect theoretical concepts with practical market behavior. The initiative significantly enhanced students' confidence and market awareness.

**- Sreesha R, BCUSMS**

## ಉಚಿತ ನೇತ್ರ ತಪಾಸಣಾ ಶಿಬಿರ



**ಪ್ರಭಾರ ಪ್ರಾಂಶುಪಾಲರಾದ ಡಾ.ಜ್ಯೋತಿ ವೆಂಕಟೇಶ್ ಹಾಗೂ ಸಿಬ್ಬಂದಿ ವರ್ಗ**

ವಿಶ್ವವಿದ್ಯಾನಿಲಯದ ಮಹಿಳಾ ಮಹಾವಿದ್ಯಾಲಯ, ಲಯನ್ಸ್ ಕ್ಲಬ್ ಹಾಗೂ ಎನ್‌ಎಸ್‌ಎಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 7ರಂದು ವಿದ್ಯಾರ್ಥಿಗಳಿಗಾಗಿ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಶಿಬಿರದಲ್ಲಿ ನೇತ್ರ ತಜ್ಞರು ವಿದ್ಯಾರ್ಥಿಗಳಿಗೆ ದೃಷ್ಟಿ ಪರೀಕ್ಷೆ ನಡೆಸಿ ಅಗತ್ಯವಿದ್ದವರಿಗೆ ಸೂಕ್ತ ಚಿಕಿತ್ಸೆಗೆ ಸಲಹೆಯಿತ್ತರು. ಕಣ್ಣಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಮಾರ್ಗೋಪಾಯಗಳನ್ನು ಸೂಚಿಸಿದರು. ಕಣ್ಣಿನ ಸಮಸ್ಯೆಗಳನ್ನು ಆರಂಭದಲ್ಲಿ ಪತ್ತೆ ಹಚ್ಚುವಿಕೆಯಿಂದ ಸಮಸ್ಯೆಯಿಂದ ಹೊರಬರಲು ಸಾಧ್ಯವಿದೆ ಎಂದು ತಿಳಿಸಿದರು. ಕಾಲೇಜಿನ ಪ್ರಬಾರ ಪ್ರಾಂಶುಪಾಲರಾದ ಡಾ.ಜ್ಯೋತಿ ವೆಂಕಟೇಶ್ ಹಾಗೂ ಸಿಬ್ಬಂದಿ ವರ್ಗದವರು ಶಿಬಿರದಲ್ಲಿ ಉಪಸ್ಥಿತರಿದ್ದರು.

## ಯುವ ಸಂಪರ್ಕ ಸಭೆ

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಫೆಬ್ರವರಿ 12ರಂದು ಯುವ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಅವರು ಜನಪದ ಕಲೆಗಳನ್ನು ಕಲಿಯುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದ ಅವರು ಆಸಕ್ತರಿಗೆ ಅಕಾಡೆಮಿಯ ವತಿಯಿಂದ ತರಬೇತಿ ಒದಗಿಸುವುದಾಗಿ ತಿಳಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶಶಿಕಲಾರವರು ಕ್ರೀಡಾ ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

## YOUTH AWARD

SNEHA.H.M., 1st year MBA student of BCUSMS was honoured with Vivekananda National Youth Excellence Award recently on National Youth Day by The Indian Forum for her unique contributions to youth empowerment, education and promotion of folk culture. Chetan R, IPS, Commissioner of the Department of Youth Empowerment and Sports, Government of Karnataka, presented the award at YAVANIKA, Nrupatunga Road, Bengaluru. She has also received Certificate of Appreciation from World Record Of Excellence last year at Bharath Mandapam, New Delhi for best folk singing and leadership in National Service Scheme (NSS).



*Awardee Sneha H M*

# ಸೆಂಟ್ರಲ್ ಕಾಲೇಜಿನ ಹೆಮ್ಮೆಯ ಭಾರತರತ್ನ ತ್ರಯರು


**ಸಿ. ರಾಜಗೋಪಾಲಾಚಾರಿ:** (ಜೀವಿತಾವಧಿ : 1878–1972) 'ಭಾರತ ರತ್ನ' ಪ್ರಶಸ್ತಿ– 1954 ಭಾರತದ ಕೊನೆಯ ಗೌರ್ನರ್ ಜನರಲ್ ಆಗಿದ್ದ 'ರಾಜಾಜಿ' ಎಂದೇ ಹೆಸರುವಾಸಿಯಾಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ 1894ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಆನಂತರ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಾನೂನು ಪದವಿ ಪಡೆದ



ಸಿ.ರಾಜಗೋಪಾಲಾಚಾರಿ

ಇವರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದರು. ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದ ರಾಜಾಜಿ ಪಶ್ಚಿಮ ಬಂಗಾಳದ ಪ್ರಥಮ ರಾಜ್ಯಪಾಲರಾಗಿ ಮತ್ತು ಮದ್ರಾಸ್ ರಾಜ್ಯದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದರು. ಪರಿಷ್ಕೃತ ಪ್ರಾಥಮಿಕ ಶಿಕ್ಷಣ ಮಸೂದೆ ವಿವಾದದ ಕಾರಣ ಅವರು ಮುಖ್ಯಮಂತ್ರಿ ಪದವಿ ತ್ಯಜಿಸಿದರು. ಕಾಂಗ್ರೆಸ್ ಪಕ್ಷವನ್ನು ತೊರೆದ ಬಳಿಕ ತಮ್ಮದೇ ಆದ 'ಸ್ವತಂತ್ರ ಪಕ್ಷ'ವನ್ನು ಸ್ಥಾಪಿಸಿದರು. ಸಾಹಿತ್ಯಾಸಕ್ತರೂ ಆಗಿದ್ದ ರಾಜಾಜಿಯವರು ತಮಿಳಿನ 'ತಿರುಕುರುಳ್' ಕೃತಿಯನ್ನು ಇಂಗ್ಲೀಷ್ ಭಾಷೆಗೆ ಅನುವಾದಿಸಿದ್ದರು. ಅಲ್ಲದೆ ರಾಮಾಯಣ ಮತ್ತು ಮಹಾಭಾರತ ಕುರಿತಾದ ಕೃತಿಗಳನ್ನೂ ರಚಿಸಿದ್ದರು. ಇವ–ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿತ್ತು. 1954ರಲ್ಲಿ ರಾಜಾಜಿಯವ–ರಿಗೆ ಪ್ರತಿಷ್ಠಿತ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.


**ಸರ್ ಎಂ. ವಿಶ್ವೇಶ್ವರಯ್ಯ:** (ಜೀವಿತಾವಧಿ : 1861–1962) 'ಭಾರತ ರತ್ನ' ಪ್ರಶಸ್ತಿ – 1955 ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1875ರಿಂದ 1881ರವರೆಗೆ ಬೆಂಗಳೂ–ರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಶಿಕ್ಷಣ ಪಡೆದರು. ತದನಂತರ ಪುಣೆಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬ್ರಿಟಿಷ್ ಸರ್ಕಾರದ ಆಳ್ವಿಕೆಯಲ್ಲಿ ಅನೇಕ



ಸರ್ ಎಂ. ವಿಶ್ವೇಶ್ವರಯ್ಯ

ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಅಗಾಧ ಪ್ರತಿಭೆಯ ದಕ್ಷ ಆಡಳಿತಗಾರರಾದ ಸರ್ ಎಂ. ವಿಶ್ವೇಶ್ವರಯ್ಯನವ–ರಿಗೆ 1955 ರಲ್ಲಿ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಹಾರಾಜ ನಾಲ್ವಡಿ ಕೃಷರಾಜ ಒಡೆಯರ್ ಅವರ ಆಹ್ವಾನದ ಮೇರೆಗೆ 1912ರಿಂದ 1918ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಕರ್ನಾಟಕ ಕೈಗಾರೀಕರಣ ಮಾತ್ರವಲ್ಲದೆ ಶೈಕ್ಷಣಿಕ ಪ್ರಗತಿಗೂ ಮಹತ್ವದ ಕೊಡುಗೆ ಸಲ್ಲಿಸಿರುವರು. ಕನ್ನಂಬಾಡಿ ಅಣೆಕಟ್ಟೆಯ (ಕೃಷ್ಣರಾಜ ಸಾಗರ) ನಿರ್ಮಾಣದಲ್ಲಿ ಮುಂಚೂಣಿ ಪಾತ್ರ ವಹಿಸಿದ್ದಲ್ಲದೆ ಭದ್ರಾವತಿ ಉಕ್ಕಿನ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸಾಬೂನು ಕಾರ್ಖಾನೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಚೇಂಬರ್ ಆಫ್ ಕಾಮರ್ಸ್, ರೈಲ್ವೆ ಮಾರ್ಗ ವಿಸ್ತರಣೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು (ಯು.ವಿ.ಸಿ.ಇ), ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜುಗಳ ಸ್ಥಾಪನೆಗೂ ಅವರು ಕಾರಣೀಭೂತರಾದರು.

**ಡಾ. ಸಿ.ಎನ್.ಆರ್. ರಾವ್:** (ಜನನ: 1934 ಜೂನ್ 30) 'ಭಾರತ ರತ್ನ' ಪ್ರಶಸ್ತಿ –2014 ರಸಾಯನಶಾಸ್ತ್ರ ವಿಜ್ಞಾನಿಯಾದ ಚಿಂತಾಮಣಿ ನಾಗೇಶ್ ರಾಮಚಂದ್ರರಾವ್ 1951 ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್‌ಸಿ. ಪದವಿ ವ್ಯಾಸಂಗ ಮುಗಿಸಿ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಸಿ. ಪದವಿ ಪಡೆದರು. 1958ರಲ್ಲಿ ಪಿಎಚ್‌ಡಿ ಪೂರ್ಣಗೊಳಿಸಿ ಮರುವರ್ಷವೇ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ (ಐ.ಐ.ಎಸ್.ಸಿ) ಅತ್ಯಂತ ಕಿರಿಯ ಉಪನ್ಯಾಸಕರಾಗಿ ನೇಮಕಗೊಂಡರು. 1984ರಿಂದ ಹತ್ತು ವರ್ಷಗಳ ಕಾಲ ಅದೇ ಸಂಸ್ಥೆಯ ನಿರ್ದೇಶಕರಾಗಿದ್ದರು. ಒಟ್ಟು 1800 ಸಂಶೋಧನಾ ಪ್ರಕಟಣೆಗಳು ಹಾಗೂ 56 ಪುಸ್ತಕಗಳನ್ನು ಇವರು ಹೊರತಂದಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಕಾನ್ಪುರ ಐಐಟಿ ಸೇರಿದಂತೆ ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಸಿ.ಎನ್.ಆರ್. ರಾವ್‌ರವರಿಗೆ ವಿಶ್ವದ 86 ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿದ್ದು ಪದ್ಮಶ್ರೀ, ಪದ್ಮವಿಭೂಷಣ, ಶಾಂತಿಸ್ವರೂಪ್ ಭಟ್ನಾಗರ್, ಮಾರ್ಲೊ ಮೆಡಲ್, ಹ್ಯೂಗ್ಸ್ ಮೆಡಲ್, ಕರ್ನಾಟಕ ರತ್ನ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ. 2014ರಲ್ಲಿ ಇವರಿಗೆ ಪ್ರತಿಷ್ಠಿತ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. 1989ರಿಂದ ಹತ್ತು ವರ್ಷಗಳ ಕಾಲ ಡಾ.ಸಿ.ಎನ್.ಆರ್. ರಾವ್ ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವರು.



ಡಾ. ಸಿ.ಎನ್.ಆರ್. ರಾವ್



# ಸಣ್ಣ ಕಥೆ: ಮರೆತ ಮಮತೆ

ಬೆಂಗಳೂರಿನ ಬೀದಿಯೊಂದರ ಮೂಲೆಯಲ್ಲಿ ವಾಸವಿದ್ದ ಶಾಂತಮ್ಮ ನಗರ ಇನ್ನೂ ಎಚ್ಚರವಾಗುವ ಮುನ್ನವೇ ಎದ್ದಿರುತ್ತಿದ್ದಳು. ಹಳೆಯ ಚೀಲ, ತುಂಡಾದ ಸೀರೆಯ ತುದಿ, ತಲೆಯ ಮೇಲೆ ಹಣ್ಣುಗಳ ಬುಟ್ಟಿ ಅದೇ ಅವಳ ಬದುಕು. ಹಣ್ಣಿನ ಬುಟ್ಟಿ ಹೊತ್ತು ಹತ್ತಾರು ವರ್ಷಗಳೇ ಕಳೆದಿವೆ. ಆದರೆ ಅವಳ ಬದುಕು ಆ ಹಣ್ಣುಗಳಷ್ಟು ರಂಗಾಗಿರಲಿಲ್ಲ. ನಸುಕಿನ ನಾಲ್ಕು ಗಂಟೆಗೆ ಎದ್ದು ಸಿಟಿ ಮಾರ್ಕೆಟ್‌ನಿಂದ ಹಣ್ಣುಗಳನ್ನು ಕೊಂಡುತಂದು, ಇಡೀ ದಿನ ಬಿಸಿಲಿನಲ್ಲಿ ಸುತ್ತಾಡುತ್ತಾ "ಹಣ್ಣು ತಗೊಳ್ಳಿ ಅಮ್ಮಾ..." ಎಂದು ಕೂಗುವುದೇ ಅವಳ ದಿನಚರಿಯಾಗಿತ್ತು. ಅನೇಕ ಸಲ ಗ್ರಾಹಕರು ಹಣ್ಣು ತೆಗೆದುಕೊಂಡು ಕಾಸು ಕೊಡದೆ ಸತಾಯಿಸುತ್ತಿದ್ದರು. ಕೆಲವರು "ಇಷ್ಟೊಂದು ಬೆಲೆನಾ?" ಎಂದು ಮೂದಲಿಸುತ್ತಿದ್ದರು. ಅಂತಹ ದಿನಗಳಲ್ಲಿ ಶಾಂತಮ್ಮ ಸಿಕ್ಕ ಅಲ್ಪಸ್ವಲ್ಪ ಹಣದಲ್ಲಿ ತಾನು ಹಸಿದಿದ್ದರೂ, ಮಕ್ಕಳಿಗೆ ರೊಟ್ಟಿ ತಂದುಕೊಡುತ್ತಿದ್ದಳು.

ತನ್ನ ಮಕ್ಕಳಾದ ರಾಜು ಮತ್ತು ರಾಣಿ ವಿದ್ಯಾವಂತರಾಗಬೇಕೆಂಬುದು ಅವಳ ಏಕೈಕ ಗುರಿಯಾಗಿ–ತ್ತು. ಒಂದೊಂದೇ ನಾಣ್ಯ ಸೇರಿಸಿ ಶಾಲೆಯ ಫೀಸ್ ಕಟ್ಟುತ್ತಿದ್ದಳು. ಬೆನ್ನೂ ಬಾಗಿದರೂ ಯೌವನ ಕಳೆದರೂ ಅವಳ ಕನಸು ಮಾತ್ರ ಮಾಸಿರಲಿಲ್ಲ. ಮಕ್ಕಳು ಕೂಡ ತಾಯಿಯ ಕಷ್ಟವನ್ನು ಕಂಡು ಬೆಳಿಗ್ಗೆ ಶಾಲೆಗೆ ಹೋಗಿ, ಸಂಜೆ ಬಂದು ಹಣ್ಣು ಮಾರಲು ನೆರವಾಗುತ್ತಿದ್ದರು. ಒಂದು ದಿನ ಶಾಲೆಯಿಂದ ಮನೆಗೆ ಬಂದ ರಾಣಿ ಮೌನಿಯಾಗಿದ್ದಳು. ಅದನ್ನು ಗಮನಿಸಿದ ತಾಯಿ, "ಏನು ರಾಣಿ, ಯಾಕೆ ಇಷ್ಟು ಮೌನವಾಗಿದ್ದೀಯಾ?" ಎಂದು ಕೇಳಿದಳು. ಆಗ ರಾಣಿ "ಅಮ್ಮ, ನನ್ನ ಸ್ನೇಹಿತರು ಟ್ರಿಪ್‌ಗೆ ಹೋಗುತ್ತಿದ್ದಾರೆ. ಅವರು ನನಗೂ ಬರಲು ಹೇಳಿದರು. ಆದರೆ ನನ್ನ ಬಳಿ ಸರಿಯಾದ ಬಟ್ಟೆಗಳಿಲ್ಲ, ಖರ್ಚಿಗೆ ಹಣವೂ ಇಲ್ಲ. ಅದಕ್ಕಾಗಿ ನಾನು ಬರಲಾರೆ ಎಂದು ಹೇಳಿಬಿಟ್ಟೆ. ನನಗೆ ಹೋಗಿ ಆನಂದಿಸಲು ಸಾಧ್ಯವಾಗುತ್ತಿಲ್ಲ" ಎಂದು ದುಃಖದಿಂದಲೇ ಉತ್ತರಿಸಿದಳು. ತಾಯಿಗೆ ಹಣದ ಮೌಲ್ಯ ಗೊತ್ತಿತ್ತು. ಆದರೂ ತನ್ನ ಮಗಳು ಸಂಕಟಪಡುತ್ತಿರುವುದನ್ನು ನೋಡಿ ಅವಳಿಗೆ ಸಹಿಸಲಾಗಲಿಲ್ಲ. ಮಗಳ ಸಂತೋಷಕ್ಕಾಗಿ ಬೇರೆಯವರ ಬಳಿ ಸಾಲವನ್ನು ಪಡೆದು ಮಗಳನ್ನು ಟ್ರಿಪ್‌ಗೆ ಕಳುಹಿಸಲು ನಿರ್ಧರಿಸಿದಳು. ತಾಯಿ ಹಣ ಕೊಡದಿದ್ದರೆ ಅವಳು ಕೆಟ್ಟ ತಾಯಿ ಎಂದು ಭಾವಿಸುತ್ತಿದ್ದಳು. ಮಗಳಿಗೆ ತಾಯಿಯ ಕಾಳಜಿ, ಅವಳು ಅನುಭವಿಸುವ ಸಂಕಷ್ಟಗಳು, ಜೀವನದ ಹೋರಾಟಗಳು ಯಾವುದೂ ಅರ್ಥವಾಗಲಿಲ್ಲ. ಅವಳಿಗೆ ಜೀವನವನ್ನು ಆನಂದಿಸುವುದೇ ಮುಖ್ಯವಾಗಿತ್ತು. ಕಾಲಚಕ್ರ ಉರುಳಿತು, ರಾಜು ಮತ್ತು ರಾಣಿ ಓದಿ ಕೆಲಸಕ್ಕೆ ಸೇರಿದರು. ಆದರೆ ಕೈಯಲ್ಲಿ ಹಣ ಬಂದಂತೆ ಅವರ ಮನಸ್ಸು ಕಿರಿದಾಯಿತು. ಯೌವನದಲ್ಲಿ ಗಟ್ಟಿಯಾಗಿ ನಿಂತು ಕುಟುಂಬವನ್ನು ಸಾಕಿ ಸಲಹಿದ್ದ ಶಾಂತಮ್ಮ ಈಗ ವಯಸ್ಸಾಗಿ ಸೊರಗಿದ್ದಾಳೆ. ಅವಳ ಕೈಗಳು ನಡುಗುತ್ತಿವೆ, ಕಣ್ಣುಗಳು ಮಂದವಾಗಿವೆ.

ತಮಗಾಗಿ ತನ್ನ ಜೀವನವನ್ನೇ ಸವೆಸಿದ ತಾಯಿಯನ್ನು ಇಂದು ಮಕ್ಕಳು "ಹೊರೆ" ಎಂದು ಭಾವಿಸುತ್ತಿದ್ದಾರೆ. "ನಿನ್ನಿಂದ ನಮಗೇನು ಲಾಭವಿದೆ?" ಎಂದು ಹೀಯಾಳಿಸುತ್ತಾ, ಅವಳನ್ನು ಮನೆಯ ಒಂದು ಮೂಲೆಯಲ್ಲಿ ಬಿದ್ದಿರುವಂತೆ ಹೇಳಿ ಕಡೆಗಣಿಸಿದ್ದಾರೆ. ಹಸಿದ ಹೊಟ್ಟೆಗೆ ಅಂದು ತಾಯಿ ನೀಡಿದ ತುತ್ತಿನ ಬೆಲೆ ಇಂದು ಆ ಮಕ್ಕಳಿಗೆ ಮರೆತುಹೋಗಿದೆ. ತಾಯಿ ಹಣ್ಣು ಮಾರಿ ಕಟ್ಟಿದ ಕನಸಿನ ಗೋಪುರದಲ್ಲಿ ಅವಳಿಗೇ ಇಂದು ಜಾಗವಿಲ್ಲದಂತಾಗಿದೆ. ಅವಳು ಹಣ ಕೇಳಲಿಲ್ಲ, ಆಸ್ತಿಯನ್ನು ಕೇಳಲಿಲ್ಲ, ಸ್ವಲ್ಪ ಗೌರವ, ಸ್ವಲ್ಪ ಪ್ರೀತಿ ತಾನು ಜೀವನಪೂರ್ತಿ ಕೊಟ್ಟಷ್ಟು ಅಲ್ಲ, ಅದರಲ್ಲಿ ಸ್ವಲ್ಪವಾದರೂ, ಆದರೆ ಅದೂ ಕೂಡಾ ಅವಳ ಪಾಲಿಗೆ ಸಿಗಲಿಲ್ಲ.

**–ನಂದಿನಿ. ಹೆಚ್.ಎಸ್**. B.com

# THE LAST PAGE

Sad, but the truth,
My college life is over,
I miss the authors and poets that my friends never knew,
The novels and verses that taught me how to live.

I miss the dusty corners of the library that knew my secrets,
The yellowed pages of classics – softer than any embrace.
I miss the lectures that became life's quiet sermons,
And the scribbled margins where my soul learned to speak.

History walked beside me through silent halls,
Empires rose and fell between lines of my notebook.
From the ruins of Rome to the echoes of Partition,
Every date, every name, carried a heartbeat I could feel.

Literature became my mirror, my compass, my home.
In Shakespeare's tragedies, I found resilience,
In Wordsworth's nature, I remembered to breathe,
In Kamala Das's rawness, I learned the courage to be bare.

To the sleepless nights before exams,
To essays that drained yet defined me,
And every text that carved its mark upon my soul,
Now I reach the last page of college.

The book isn't closed – just a new chapter begun.
Armed with words, with wonder, and a heart full of stories,
I walk on – not just a student anymore,
But a keeper of voices, a seeker of truth.

**-Ngangom Loyangamba Meetei, MA- English**

**IMPORTANT NOTE**

Visit Dr Manmohan Singh Bengaluru City Uni-versity's official website www.bcu.ac.in for regular updates of University activities and also read ANIKETANA. Send Reports/Photos to **E-mail id : aniketana@bcu.ac.in**


**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ,**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ,**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ,**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ,**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ ,**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ,**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್,**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ,**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

**ವನ್ಯಾ,** ಎಂಸಿಜೆ, ದ್ವಿತೀಯ
**ರಕ್ಷಿತ,** ಎಂಸಿಜೆ, ಪ್ರಥಮ
**ನಿತಿನ್,** ಎಂಸಿಜೆ, ದ್ವಿತೀಯ


**ತಿಂಗಳ ಬುತ್ತಿ**

**ಮಾರ್ಚ್ 10:** ಸಂಸ್ಥಾಪನಾ ದಿನಾಚರಣೆ, ವಿ.ವಿ. ಮಹಿಳಾ ಕಾಲೇಜು.
**ಮಾರ್ಚ್ 26,27,28:** ಕರ್ನಾಟಕ ಇತಿಹಾಸ ಕಾಂಗ್ರೆಸ್, 36ನೇ ವಾರ್ಷಿಕ ಅಧಿವೇಶನ.
*ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ.
*ರಾಷ್ಟ್ರೀಯ ವಿಜ್ಞಾನ ದಿನಾಚರಣೆ.

# ಯಾರಿವರು?

ಯಾರಿವರು?
ಏನಿಹುದು ಇವರೆದೆಯಲ್ಲಿ?
ಟೊಂಕಕಟ್ಟಿ ನಿಂತಿರುವರು,
ದ್ವೇಷಕಥನಗಳ ಬಣ್ಣಿಸಲು.

ಯಾರಿವರು?
ಬಂಧುತ್ವದ ಭಾಷೆ
ಗೊತ್ತಿಲ್ಲದವರು.
ಎಂದೂ ಕಾಣದವರ ಮೇಲೆ,
ವಿಷವುಣಿಸುತ್ತಿರುವವರು.

ಯಾರಿವರು?
ಪುರಾಣಗಳ ಇತಿಹಾಸ
ಮಾಡಿದವರು.
ಅಮಾನವೀಯ ಕಟ್ಟುಕತೆಗಳ,
ನಿಜವೆಂದು ಸಾರುತ್ತಿರುವವರು.

ಯಾರಿವರು?
ಮೌಢ್ಯತೆಯ ಬಿತ್ತಿ
ಬೆಳೆಯುವವರು.
ಸಹಜ ಚಿಂತನೆಯ,
ಮೊಟಕು ಮಾಡುತ್ತಿರುವವರು.

ಯಾರಿವರು?
ವರ್ಣ–ಜಾತಿಯ ಸಮರ್ಥಕರು.
ಅಸಮಾನತೆಯ ಪ್ರತಿಪಾದಕರು
ಆತ್ಮಸಾಕ್ಷಿಗೆ ಕಂಬಳಿ
ಹೊದಿಸಿಕೊಂಡವರು

**–ಚರಣ್ ಗೌಡ,**
**ಎಂ.ಎ. ಇಂಗ್ಲೀಷ್**

Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001